

ಪರಿಚಯಿಸಿಕೊಳ್ಳುವುದೇ ಇದಕ್ಕೆ ಕಾರಣ. ಮೌಖಿಕವಾಗಿ ಸಿಗುವ ಮಾಹಿತಿಗಳೊಂದಿಗೆ ಕೈಬರಹ, ಮುದ್ರಣ ಕೃತಿಗಳ ವಿವರ ಕಲೆಹಾಕಿ ಚುರುಕು ಸಂಭಾಷಣೆ, ವಿಶಿಷ್ಟ ಶೈಲಿ ಅಭಿನಯ, ಸ್ಥಳೀಯ ಗೀತೆಗಳು ಹಾಗೂ ಮನಸ್ಸಿಗೊಪ್ಪುವ ಸಂಗೀತವನ್ನು ಅಳವಡಿಸಿ ನಾಟಕವನ್ನು ಅಲ್ಲಾಳರು ತಯಾರು ಮಾಡುತ್ತಿದ್ದರು.

ವಿಶ್ವಕರ್ಮ ಜನಾಂಗದ 'ಅಳ್ಳಳ್ಳಿ ಅಯ್ಯಪ್ಪಯ್ಯ ಮಹಾತ್ಮೆ' ಅಲ್ಲಾಳರು ರಚಿಸಿದ ಜನಪ್ರಿಯ ನಾಟಕಗಳಲ್ಲೊಂದು. ಇದು ಪ್ರತಿ ವರ್ಷ ಚಿತ್ತಪುರ ತಾಲ್ಲೂಕಿನ 'ಅಳ್ಳಳ್ಳಿ'ಯಲ್ಲಿ ವಾರಗಟ್ಟಲೆ ಪ್ರದರ್ಶನಗೊಳ್ಳುವ ನಾಟಕ. ಇದನ್ನು ಅವರೇ ರಚಿಸಿ– ನಿರ್ದೇಶಿಸಿ ಕೊಟ್ಟರು. ಅದು ಈಗಲೂ ಮುಂದುವರೆದಿರುವುದು ನಾಟಕ ಪಡೆದಿರುವ ಜನ ಮನ್ನಣೆಗೆ ನಿದರ್ಶನ.

ಪ್ರತಿಷ್ಠಿತ ನಾಟಕ ಸಂಸ್ಥೆಗಳ ಪ್ರಸಿದ್ಧ ನಟ–ನಟಿಯರ ಒಡನಾಟ ಹೊಂದಿದ್ದ ಅಲ್ಲಾಳರು ಹಳ್ಳಿಗಾಡಿನಲ್ಲಿ ನಿರ್ದೇಶನಕ್ಕೆ ಇಳಿದ ಮೇಲೆ ರೈತಾಪಿ ಜನರನ್ನೇ ಕಲಾವಿದರನ್ನಾಗಿ ಸಿದ್ಧಗೊಳಿಸಿದರು. ರಂಗ ಮಂಚವನ್ನು ಹೆಚ್ಚು ಅದ್ದೂರಿತನದಿಂದ ಸಿಂಗರಿಸದೆ ಸರಳವಾಗಿ ಸಜ್ಜು ಮಾಡುವುದನ್ನು ಹಳ್ಳಿಗರಿಗೆ ಕಲಿಸಲು ಅವರು ಮರೆಯಲಿಲ್ಲ.

ಒಂದೇ ಪ್ರದೇಶಕ್ಕೆ, ಕೆಲವೊಮ್ಮೆ ಒಂದೇ ಹಳ್ಳಿಗೂ ಸೀಮಿತವಾಗಿರುವ ವ್ಯಕ್ತಿಗಳು ಆ ಭಾಗದ ಜನರಮೇಲೆ ಬೀರಿರುವ ಪ್ರಭಾವಗಳನ್ನು ಅಭ್ಯಾಸ ಮಾಡಿ ನಂತರ ಅದನ್ನು ನಾಟಕಕ್ಕೆ ಒಗ್ಗಿಸುವುದು ಅಲ್ಲಾಳರ ಶೈಲಿ. ಇದು ಇವರಿಗೆ ಕ್ರಮೇಣ ಎಷ್ಟೊಂದು ಕರಗತವಾಯಿತೆಂದರೆ 40–50 ಮಂದಿಯ ಇಂತಹ ನಾಟಕಗಳು ಅವರಿಂದ ರಚನೆಗೊಂಡವು.

ವೃತ್ತಿರಂಗಭೂಮಿಯಲ್ಲಿ ಚೆನ್ನಾಗಿ ಪಳಗಿದ್ದ ಅಲ್ಲಾಳರು ಹಳ್ಳಿನಾಟಕಗಳಿಗೆ ಹೊಸ ಮಾರ್ಗ ಸೃಷ್ಟಿದರು, ಹಲವು ಜಾತಿ–ಧರ್ಮಗಳಿಗೆ ಸೇರಿದ ಅಧ್ಯಾತ್ಮ ನೇತಾರರ ನಡೆನುಡಿಗಳನ್ನು ಅಧ್ಯಯನ ಮಾಡಿ ಸ್ಥಳೀಯ ಸೊಗಡನ್ನು ಅದರಲ್ಲಿ ಬೆಸೆದು ನಾಟಕಗಳನ್ನು ಹೆಣೆದರು. ಅದನ್ನು ಸಮರ್ಥವಾಗಿ ರಂಗದ ಮೇಲೆ ತರುವ ಕಾಯಕದಲ್ಲೂ ಅಲ್ಲಾಳರು ಸಕ್ರಿಯರಾದರು.

ಹಳ್ಳಿಗಾಡಿನಲ್ಲಿ ಸಾಮಾನ್ಯರಾಗಿದ್ದು ಸರಳ ಚಿಂತನೆಗಳಿಂದ ನೆಮ್ಮದಿಯ ಜೀವನಕ್ಕೆ ಅನುವಾಗುವಂತೆ ಪ್ರೇರೇಪಿಸಿದ ವ್ಯಕ್ತಿಗಳು ಜನರ ಮನಸ್ಸಿನಲ್ಲಿ ಬಹುಬೇಗ ನೆಲೆಗೊಳ್ಳುತ್ತಾರೆ. ಕಾಣದ ದೇವರಿಗಿಂತ ಕಾಣಲು ಸಿಗುವ ಇಂತಹ ವ್ಯಕ್ತಿಗಳ ಬದುಕು–ಸಾಧನೆಗಳನ್ನು ರಂಗ ರೂಪದಲ್ಲಿ ಕಟ್ಟಿಕೊಡುವಲ್ಲಿ ಅಲ್ಲಾಳ್ ಮಾಸ್ತರ್ ದೃಷ್ಟಿ ನೆಟ್ಟರು. ಹೀಗಾಗಿ ಇವರ ಲೇಖನಿಯಿಂದ ಹರಿದು ಬಂದ ವ್ಯಕ್ತಿ ಬದುಕಿನ ಆಧಾರಿತ ನಾಟಕಗಳ ಸಂಖ್ಯೆ 40ಕ್ಕೂ ಹೆಚ್ಚು.

ಈಡಿಗರ ಗುರು ಕುರಿತ 'ಗರತಿ ವಿಶ್ವ ಜ್ಯೋತಿ', ಕುರುಬರ ಯಲ್ಲಪ್ಪ, ಸ್ವಾಮಿ ಬಗೆಗಿನ 'ಮುಗಳ ಖೋಡ ಮುತ್ತು', 'ಮೊಟನಹಳ್ಳಿ ಹಸನ್ ಸಾಬ್' ಹೀಗೆ ಅಲ್ಲಾಳ್ ಅವರು ರಚಿಸಿದ ನಾಟಕಗಳ ಪಟ್ಟಿ ಬೆಳೆಯುತ್ತದೆ.

⌘